# ಸಾಂವಿಧಾನಿಕ ಸಂಸ್ಥೆಗಳ ಬಿಕ್ಕಟ್ಟು ನೋವಿನ ಸಂಗತಿ

ಭಾರತದ ಚುನಾವಣಾ ಆಯೋಗ ಹಿಂದೆ ಗಳಿಸಿದ್ದ ವಿಶ್ವಾಸಾರ್ಹತೆ ಕುಗ್ಗಿದಂತೆ ಕಾಣಿಸುತ್ತಿದೆ. ಅದರ ವಿರುದ್ಧ ಎರಡು–ಮೂರು ವರ್ಷಗಳಿಂದ ಈಚೆಗೆ ಪ್ರಶ್ನೆಗಳು ಪದೇ ಪದೇ ಏಳಲಾರಂಭಿಸಿವೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ವಿರುದ್ಧ ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಕೂಡ ಆತಂಕವನ್ನು ಹುಟ್ಟಿಸಿದೆ.

ವಿಶ್ವಾಸಾರ್ಹತೆ ಎಂಬುದು ಜನತಂತ್ರದ ಉಸಿರಿದ್ದಂತೆ. ಆದರೆ, ಇತ್ತೀಚಿನ ಕೆಲವು ವಿದ್ಯಮಾನಗಳನ್ನು ಗಮನಿಸಿದರೆ, ಪ್ರಜಾಪ್ರಭುತ್ವದಲ್ಲಿ ಬಹಳ ಮಹತ್ತರ ಪಾತ್ರ ವಹಿಸುವ ಎರಡು ಪ್ರಮುಖ ಸಂಸ್ಥೆಗಳು ವಿಶ್ವಾಸಾರ್ಹತೆಯ ವಿಚಾರದಲ್ಲಿ ಬಿಕ್ಕಟ್ಟು ಎದುರಿಸಿದಂತೆ ಕಾಣಿಸುತ್ತದೆ.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಚುನಾವಣೆಗಳನ್ನು ಬಹಳ ಅಚ್ಚುಕಟ್ಟಾಗಿ ಮತ್ತು ವಿಶ್ವಾಸಾರ್ಹತೆಗೆ ಕುಂದು ಉಂಟಾಗದಂತೆ ನಡೆಸಿದ ಹಿರಿಮೆಯನ್ನು 'ಭಾರತದ ಚುನಾವಣಾ ಆಯೋಗ' ಹೊಂದಿತ್ತು. ಆಯೋಗದ ವಿಶ್ವಾಸಾರ್ಹತೆಯ ಬಗ್ಗೆ ಕೆಲವು ವರ್ಷಗಳ ಹಿಂದಿನವರೆಗೂ ಗಂಭೀರವಾದ ಪ್ರಶ್ನೆಗಳು ಎದ್ದಿರಲಿಲ್ಲ. ಆದರೆ ಎರಡು–ಮೂರು ವರ್ಷಗಳಿಂದ ಈಚೆಗೆ ಪ್ರಶ್ನೆಗಳು ಪದೇ ಪದೇ ಏಳಲಾರಂಭಿಸಿವೆ. ಇದು, ಖಂಡಿತವಾಗಿಯೂ ಒಳ್ಳೆಯ ಬೆಳವಣಿಗೆ ಅಲ್ಲ.

ಚುನಾವಣಾ ವೇಳಾಪಟ್ಟಿ ಪ್ರಕಟಣೆಯಿಂದ ನೀತಿಸಂಹಿತೆ ಜಾರಿಯವರೆಗಿನ ಆಯೋಗದ ನೀತಿ–ನಿಲುವು ಹಾಗೂ ನಿರ್ಧಾರಗಳು ಆಡಳಿತಾರೂಢ ಪಕ್ಷಕ್ಕೆ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಇವೆ ಎಂಬ ಅನುಮಾನ ಮೂಡುವುದಿದೆಯಲ್ಲ, ಅದು ವಿಶ್ವಾಸಾರ್ಹತೆಗೇ ಬಿದ್ದಿರುವ ದೊಡ್ಡ ಪೆಟ್ಟು ಎಂಬುದರಲ್ಲಿ ಅನುಮಾನ ಇಲ್ಲ.

ಒಡಿಶಾದ ಸಂಬಲ್‌ಪುರ ಜಿಲ್ಲೆಯಲ್ಲಿ ಚುನಾವಣಾ ವೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕರ್ನಾಟಕ ಬ್ಯಾಚ್‌ನ ಐಎಎಸ್ ಅಧಿಕಾರಿ ಮೊಹಮದ್ ಮೊಹಿಸಿನ್ ಅವರು ಪ್ರಧಾನಿ ನರೇಂದ್ರ ಮೋದಿ ಪಯಣಿಸುತ್ತಿದ್ದ ಹೆಲಿಕಾಪ್ಟರ್ ಅನ್ನು ಪರಿಶೀಲಿಸುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಚುನಾವಣಾ ಕಾರ್ಯದಿಂದ ಮೊಹಿಸಿನ್ ಅವರನ್ನು ಆಯೋಗವು ಅಮಾನತು ಮಾಡಿತ್ತು. ಬಳಿಕ ಆ ಆದೇಶಕ್ಕೆ ಕೇಂದ್ರ ಆಡಳಿತ ನ್ಯಾಯಮಂಡಳಿ ಮಧ್ಯಂತರ ತಡೆ ನೀಡಿತು... ಎಂಬೆಲ್ಲ ಬೆಳವಣಿಗೆ ಈಗ ಓದಿ ಸವಕಲಾದ ಸುದ್ದಿ.

ನಿಯಮಗಳ ಚೌಕಟ್ಟನ್ನು ಮೊಹಿಸಿನ್ ಅವರು ಮೀರಿದ್ದರೆ ಅಥವಾ ಆಯೋಗವೇ ದುಡುಕಿ ಕ್ರಮ ಜರುಗಿಸಿತೇ... ಎಂಬ ಪ್ರಶ್ನೆಗಳಿಗೆ ಮುಂದಿನ ದಿನಗಳಲ್ಲಿ ಸ್ಪಷ್ಟ ಉತ್ತರ ಸಿಗಬಹುದು. ಆದರೆ ಆಯೋಗದ ವಿರುದ್ಧ ಒಬ್ಬ ಅಧಿಕಾರಿ ಸಡ್ಡು ಹೊಡೆಯುವಂತಹ ಸ್ಥಿತಿ ತಂದುಕೊಂಡಿರುವುದು ವರ್ಚಸ್ಸಿಗೆ ಬಿದ್ದಿರುವ ಹೊಡೆತ ಎಂದೇ ಭಾವಿಸಬೇಕಾಗುತ್ತದೆ. ಅಧಿಕಾರಾರೂಢರು ಆಯೋಗವನ್ನು ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಜನಸಾಮಾನ್ಯರ ನಂಬಿಕೆಗೆ ಬಿದ್ದ ಹೊಡೆತ ಇದು. ಪತನ ಯಾವುದೇ ರೂಪದಲ್ಲಿ, ಯಾವುದೇ ಪ್ರಮಾಣದಲ್ಲಿ ಆದರೂ ಅದು ಪತನವೇ. ಒಮ್ಮೆ ಶುರುವಾದರೆ ಅದಕ್ಕೆ ತಡೆಯೊಡ್ಡುವುದು ಸುಲಭವಲ್ಲ.

ದ್ವೇಷಪೂರಿತ ಭಾಷಣಗಳು ಈ ಸಲದ ಚುನಾವಣೆಯಲ್ಲಿ ಬಳಕೆಯಾದಷ್ಟು ಹಿಂದೆಂದೂ ಆಗಿರಲಿಲ್ಲ. ಸೇನೆಯ ಸಾಧನೆ, ಮತ–ಧರ್ಮ... ಎಲ್ಲವೂ ಎಗ್ಗಿಲ್ಲದೆ ಬಳಕೆಯಾಗುತ್ತಿವೆ. ಈ ಬಗೆಯ ಮಾತುಗಳನ್ನಾಡಿದವರ ಯಾದಿಯಲ್ಲಿ ಪ್ರಧಾನಿಯವರೂ ಸೇರಿರುವುದು ದುರದೃಷ್ಟಕರ ಸಂಗತಿ. ಆದರೆ ಇಂತಹ ಮಾತುಗಳನ್ನಾಡಿದ ಎಲ್ಲ ಸಂದರ್ಭಗಳಲ್ಲಿಯೂ ಆಯೋಗವು ನಿರ್ಲಿಪ್ತ ಧೋರಣೆ ತಳೆದಿತ್ತು. 'ಆಯೋಗಕ್ಕೆ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲ' ಎಂಬರ್ಥದ ಮಾತುಗಳನ್ನು ಆಯೋಗದ ಪರ ವಕೀಲರೇ ಸುಪ್ರೀಂ ಕೋರ್ಟ್‌ನಲ್ಲಿ ಆಡಿದ್ದುಂಟು. ಆ ಸಂದರ್ಭದಲ್ಲಿ, ಆಯೋಗದ ಅಧಿಕಾರ ವ್ಯಾಪ್ತಿಯನ್ನು ಪರಿಶೀಲಿಸುತ್ತೇವೆ ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಪ್ರತಿಕ್ರಿಯಿಸಿದ್ದರ ಪರಿಣಾಮವೋ ಎಂಬಂತೆ ಕೆಲವು ನಾಯಕರ ಪ್ರಚಾರಕ್ಕೆ ನಿರ್ಬಂಧ ಹೇರಲಾಯಿತು.

ಹೀಗೆ ಆಯೋಗದ ಮಂಪರು ಸರಿಸಿದ ವಾರ–ಒಪ್ಪೊತ್ತಿನಲ್ಲಿ ಸುಪ್ರೀಂ ಕೋರ್ಟ್ ಕೂಡ ಜನರ ಚಿಕಿತ್ಸಕ ನೋಟಕ್ಕೆ ಒಳಗಾಗಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ರಂಜನ್ ಗೊಗೊಯಿ ವಿರುದ್ಧ ಕೇಳಿಬಂದಿರುವ ಲೈಂಗಿಕ ದೌರ್ಜನ್ಯದ ಆರೋಪಕ್ಕೆ ಸಿಜೆಐ ಅವರಿಂದಲೇ ತರಾತುರಿಯಲ್ಲಿ ವ್ಯಕ್ತವಾದ ಪ್ರತಿಕ್ರಿಯೆ ಹಾಗೂ ಅದನ್ನು ನಿರ್ವಹಿಸಿದ ರೀತಿ ಕೂಡ ಟೀಕೆಗೆ ಒಳಗಾಗಿದೆ. ಗೊಗೊಯಿ ಅವರು ತಮ್ಮ ವಿರುದ್ಧದ ಆರೋಪದ ಕುರಿತು ವಿಚಾರಣೆ ನಡೆಸಿದ ನ್ಯಾಯಪೀಠದ ಭಾಗವಾಗಿದ್ದಂತೂ ಯುಕ್ತ ನಡೆಯಲ್ಲ. ಸಿಜೆಐ ಅವರನ್ನು ಲೈಂಗಿಕ ಕಿರುಕುಳದ ಸುಳ್ಳು ಪ್ರಕರಣದಲ್ಲಿ ಸಿಲುಕಿಸಲು ಪಿತೂರಿ ನಡೆದಿದೆ ಎಂದು ವಕೀಲರೊಬ್ಬರು ಮಾಡಿರುವ ಆರೋಪವಂತೂ ಗಂಭೀರ ಸ್ವರೂಪದ್ದಾಗಿದೆ. ಅದರಲ್ಲಿ ನಿಜಾಂಶ ಇದೆಯೋ ಇಲ್ಲವೋ ಎಂಬುದು ಬೇರೆ ಮಾತು. ಆದರೆ ಆ ಬಗೆಯ ಆಲೋಚನೆಯೇ ಬೆಚ್ಚಿಬೀಳಿಸುವಂತಹುದು ಮತ್ತು ಜನಸಾಮಾನ್ಯರಿಗೆ ಅದು ನೀಡುವ ಸಂದೇಶವೇ ಬೇರೆ ಬಗೆಯದು.

ಇದರ ಮಧ್ಯೆ, ಸಿಜೆಐ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪದ ಬಗ್ಗೆ ಆಂತರಿಕ ತನಿಖೆಗೆ ರಚಿಸಲಾಗಿರುವ ಸಮಿತಿಯ ಬಗ್ಗೆಯೇ ಅಪಸ್ವರ ಹೊರಟಿತು. ಈ ಸಮಿತಿಯಲ್ಲಿ ಬಾಹ್ಯ ಮಹಿಳಾ ಸದಸ್ಯರು ಇಲ್ಲ ಎಂಬ ಅಂಶವನ್ನು ಸಂತ್ರಸ್ತೆ ಪ್ರಸ್ತಾಪಿಸಬೇಕಾದಂತಹ ಸ್ಥಿತಿ ಒದಗಿದ್ದು ಕೂಡ ವಿಪರ್ಯಾಸವೇ ಸರಿ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯ ಹೊಣೆ ಹೊತ್ತ ಸಂಸ್ಥೆಗಳು ವಿಶ್ವಾಸಾರ್ಹತೆಯ ವಿಚಾರದಲ್ಲಿ ಈ ರೀತಿ ಬಿಕ್ಕಟ್ಟುಗಳನ್ನು ಎದುರಿಸುವಂತಾಗಿರುವುದು ಅತ್ಯಂತ ನೋವಿನ ಸಂಗತಿ.

■ ಎನ್. ಉದಯಕುಮಾರ್



ಈಶ್ವರ